# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ವನ್ಯಪ್ರಾಣಿಗಳಿಂದ ಉಂಟಾದ ಹಸು ಪ್ರಾಣಹಾನಿಗೆ ದಯಾತ್ಮಕ ಧನ (ಪರಿಹಾರ ಧನ) ಹೆಚ್ಚಿಸಿ ಪರಿಷ್ಕರಿಸುವ ಬಗ್ಗೆ.

ಓದಲಾಗಿದೆ:

1. *ಸರ್ಕಾರದ ಆದೇಶ ಸಂಖ್ಯೆ: ಅಪಜೀ 143 ಎಫ್‌ಡಬ್ಲ್ಯೂಎಲ್ 2010, ದಿನಾಂಕ:30.04.2011.*
2. *ಸರ್ಕಾರದ ಆದೇಶ ಸಂಖ್ಯೆ: ಅಪಜೀ 109 ಎಫ್‌ಎಪಿ 2014, ದಿನಾಂಕ:13.08.2014.*
3. *Revised list of items & norms of assistance from State Disaster Response Fund (SDRF)/National Disaster Response Fund (NDRF) Lt.No:32-7/2014-NDM-I, ದಿನಾಂಕ:08.04.2015.*
4. *ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಇವರ ಪತ್ರ ಸಂಖ್ಯೆ:ಪ್ರಮುಅಸಂ(ವಜೀ) /ಸಿ2/ ಸಿಆರ್-37 / 2011-12, ದಿನಾಂಕ: 20.04.2018, 21.05.2020 & 08.10.2020.*

*****

**ಪ್ರಸ್ತಾವನೆ:**

ಮೇಲೆ (1) ರಲ್ಲಿ ಓದಲಾದ ದಿನಾಂಕ:30.04.2011ರ ಆದೇಶದಲ್ಲಿ, ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾಠಗುವ ಬೆಳೆನಾಶ, ಮಾನವ ಪ್ರಾಣಹಾನಿ, ಸಾಕುಪ್ರಾಣಿಗಳ ಪ್ರಾಣಹಾನಿ, ಶಾಶ್ವತ ಅಂಗವಿಕಲತೆ, ಗಾಯ ಗೊಂಡವರಿಗೆ ಹಾಗೂ ಅಸ್ತಿ-ಪಾಸ್ತಿ ನಷ್ಟಕ್ಕೆ ಸಂಬಂಧಿಸಿದಂತೆ ಪರಿಹಾರ ಮೊತ್ತವನ್ನು ನಿಗದಿಪಡಿಸಿ ವಿತರಿಸಲು ಅರಣ್ಯ ಇಲಾಖೆಯ ಕ್ಷೇತ್ರಾಧಿಕಾರಿಗಳಿಗೆ ಆರ್ಥಿಕ ಅಧಿಕಾರ ಪ್ರತ್ಯಾಯೋಜಿಸಿ ಮಂಜೂರಾತಿ ನೀಡಲಾಗಿದೆ.

ಮೇಲೆ (2) ರಲ್ಲಿ ಓದಲಾದ ದಿನಾಂಕ:13.08.2014ರ ಸರ್ಕಾರದ ಆದೇಶದಲ್ಲಿ, ಸರ್ಕಾರವು 2014-15ನೇ ಸಾಲಿನಿಂದ ಜಾರಿಗೆ ಬರುವಂತೆ ಮಾನವ-ವನ್ಯಜೀವಿ ಸಂಘರ್ಷದಿಂದಾಗಿ ಹಸು, ಎತ್ತು, ಎಮ್ಮೆ, ಕೋಣಗಳು ಮೃತಪಟ್ಟಲ್ಲಿ ಅವುಗಳ ಮಾಲೀಕರಿಗೆ ನೀಡಲಾಗುತ್ತಿರುವ ಪರಿಹಾರ ಧನವನ್ನು ರೂ.10,000/-ಕ್ಕೆ ಹೆಚ್ಚಿಸಲು ಹಾಗೂ ಮೇಕೆ, ಕುರಿಗಳು ಮೃತಪಟ್ಟಲ್ಲಿ ಅವುಗಳ ಮಾಲೀಕರಿಗೆ ನೀಡಲಾಗುತ್ತಿರುವ ಪರಿಹಾರ ಧನವನ್ನು ರೂ.5,000/-ಗಳಿಗೆ ಹೆಚ್ಚಿಸಲು ಹಾಗೂ ಬೆಳೆ ಹಾನಿ ಉಂಟಾದಲ್ಲಿ ಸಂತ್ರಸ್ಥ ರೈತರಿಗೆ ನೀಡಲಾಗುತ್ತಿರುವ ಪರಿಹಾರ ಧನದ ಗರಿಷ್ಠ ಮಿತಿಯನ್ನು ರೂ.50,000/- ರಿಂದ ರೂ.1,00,000/-ಗಳಿಗೆ ಹೆಚ್ಚಿಸಲು ಸರ್ಕಾರದ ಅನುಮೋದನೆ ನೀಡಲಾಗಿದೆ.

ಮೇಲೆ (3) ರಲ್ಲಿ ಓದಲಾದ ರಾಷ್ಟ್ರೀಯ ವಿಪತ್ತು ನಿರ್ವಹಣಾ ನಿಧಿ(NDRF)/ರಾಜ್ಯ ವಿಪತ್ತು ನಿರ್ವಹಣಾ ನಿಧಿ (SDRF) ಯಿಂದ ಹೊರಡಿಸಲಾಗಿರುವ ಪರಿಷ್ಕೃತ ಪಟ್ಟಿ/ ಮಾನದಂಡಗಳ ಪ್ರಕಾರ ಸಣ್ಣ ಮತ್ತು ಅತಿಸಣ್ಣ ರೈತರಿಗೆ ಪಶು ಪಾಲನೆ ನೆರವಿನಡಿಯಲ್ಲಿ ಎಮ್ಮೆ, ಹಸುವಿನಂತಹ ಹಾಲು ನೀಡುವ ಪ್ರಾಣಿಗಳಿಗೆ ರೂ.30,000/- ಹಾಗೂ ಕುರಿ ಮತ್ತು ಮೇಕೆಯಂತಹ ಪ್ರಾಣಿಗಳಿಗೆ ರೂ.3,000/-ಗಳನ್ನು ರಾಜ್ಯ ಸರ್ಕಾರವು ಗೊತ್ತುಪಡಿಸಿರುವ ಸಕ್ಷಮ ಪ್ರಾಧಿಕಾರದಿಂದ ಪ್ರಮಾಣೀಕರಿಸುವ ಷರತ್ತಿನೊಂದಿಗೆ ನೀಡುವಂತೆ ಸೂಚಿಸಲಾಗಿರುತ್ತದೆ.

ಮೇಲೆ (4) ರಲ್ಲಿ ಓದಲಾದ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ರವರ ಪತ್ರಗಳಲ್ಲಿ, ವನ್ಯಪ್ರಾಣಿಗಳ ದಾಳಿಯಿಂದ ಉಂಟಾಗುವ ಹಸು, ಎತ್ತು, ಎಮ್ಮೆ, ಕೋಣಗಳ ಹತ್ಯೆ ಪ್ರಕರಣಗಳಲ್ಲಿ ಪ್ರಸ್ತುತ ಸರ್ಕಾರದ ಆದೇಶ ಸಂಖ್ಯೆ: ಅಪಜೀ 109 ಎಫ್‌ಎಪಿ 2014, ದಿನಾಂಕ:13.08.2014ರ ಆದೇಶದಂತೆ ರೂ.10,000/-ಗಳನ್ನು ಹಾಗೂ ಕುರಿ, ಮೇಕೆ, ಆಡು ಹತ್ಯೆಯಾದ ಪ್ರಕರಣಗಳಲ್ಲಿ ರೂ.5,000/-ಗಳನ್ನು ಪಾವತಿಸಲಾಗುತ್ತಿದೆ. ದಿನಾಂಕ:20.04.2018ರ ಪತ್ರದಲ್ಲಿ ವನ್ಯಪ್ರಾಣಿಗಳ ದಾಳಿಯಿಂದ ಉಂಟಾದ ಹಸು ಹತ್ಯೆ ಪ್ರಕರಣಗಳಲ್ಲಿ ಪ್ರಸ್ತುತ ಪಾವತಿಸುತ್ತಿರುವ ದಯಾತ್ಮಕ ಧನ ರೂ.10,000/- ಕಡಿಮೆಯಾಗಿದ್ದು, ಸದರಿ ದರವನ್ನು

......2

ಪರಿಷ್ಕರಿಸುವಂತೆ ರೈತ ಸಂಘದ ಮುಖಂಡರು ಹಾಗೂ ಜನ ಪ್ರತಿನಿಧಿಗಳು ಇಲಾಖೆಯ ಅಧಿಕಾರಿಗಳನ್ನು ಆಗ್ರಹಿಸಿರುತ್ತಾರೆ ಹಾಗೂ ಇಲಾಖೆಯ ಕ್ಷೇತ್ರಮಟ್ಟದ ಅಧಿಕಾರಿಗಳು ಸಹ ದಯಾತ್ಮಕ ಧನವನ್ನು ಪರಿಷ್ಕರಿಸಲು ಕೋರಿರುತ್ತಾರೆ. ಆದ್ದರಿಂದ ಹಸು, ಎತ್ತು, ಎಮ್ಮೆ ಹಾಗೂ ಕೋಣಗಳ ಹತ್ಯೆ ಪ್ರಕರಣಗಳಲ್ಲಿ ಈಗ ಪಾವತಿಸುತ್ತಿರುವ ದಯಾತ್ಮಕ ಧನವನ್ನು ರೂ.10,000/-ಗಳಿಂದ ರೂ.75,000/-ಗಳಿಗೆ ಹೆಚ್ಚಿಸಲು ಹಾಗೂ ಪಾವತಿಸಬೇಕಾದ ರೂ.75,000/-ಗಳಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಘಟನೆ ನಡೆದ ತಕ್ಷಣಾ ರೂ.20,000/-ಗಳನ್ನು ಪಾವತಿಸಲು ಹಾಗೂ ಉಳಿತ ಮೊತ್ತದಲ್ಲಿ ಅರ್ಹ ಮೊತ್ತವನ್ನು ಸ್ಥಳೀಯ ಪಶುವೈದ್ಯಾಧಿಕಾರಿ ಪರಿಶೀಲಿಸಿ ನಿರ್ಣಾಯಿಸಿದ ನಂತರ ಪಾವತಿಸಲು ಸೂಕ್ತ ಆದೇಶ ಹೊರಡಿಸಲು ಕೋರಲಾಗಿರುತ್ತದೆ. ದಿನಾಂಕ:31.07.2018ರ ಸರ್ಕಾರದ ಪತ್ರದಲ್ಲಿ ಸದರಿ ಪ್ರಸ್ತಾವನೆಯು ಅಸ್ಪಷ್ಟವಾಗಿದ್ದು, ಅನುಷ್ಠಾನದಲ್ಲಿ ಪ್ರಾಯೋಗಿಕವಾಗಿರದೇ ಅದರ ದುರುಪಯೋಗಕ್ಕೆ ಅವಕಾಶಗಳಿರುವುದರಿಂದ ಎಲ್ಲಾ ತರಹದ ಸಾಕುಪ್ರಾಣಿಗಳ ವಿವರಗಳು ಹಾಗೂ ಅವುಗಳ ಪ್ರಾಣಹಾನಿ ಸಂದರ್ಭದಲ್ಲಿ ಹೆಚ್ಚುವರಿ ಮಾಡಬಹುದಾದ ದಯಾತ್ಮಕ ಧನದ ಕುರಿತು ಮರು ಪರಿಶೀಲಿಸಿ ಸಮಗ್ರವಾದ ವಿವರಣೆಯೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸೂಚಿಸಲಾಗಿದೆ.

ಅದರಂತೆ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದ್ದು, ದಿನಾಂಕ:13.08.2014ರ ಸರ್ಕಾರದ ಆದೇಶವು 6 ವರ್ಷಗಳ ಹಳೆಯದಾಗಿದ್ದು ಮಾರುಕಟ್ಟೆಯಲ್ಲಿ ದರಗಳು ಹೆಚ್ಚಾಗಿದ್ದು, ರೈತ ಸಂಘದ ಮುಖಂಡರು, ಜನ ಪ್ರತಿನಿಧಿಗಳು ಹಾಗೂ ಇಲಾಖೆಯ ಕ್ಷೇತ್ರ ಮಟ್ಟದ ಅಧಿಕಾರಿಗಳೂ ಕೋರಿದಂತೆ ಇದನ್ನು ಪರಿಷ್ಕರಿಸುವ ಅವಶ್ಯಕತೆ ಇದೆ. ಗ್ರಾಮೀಣ ರೈತರ ಜೀವನದಲ್ಲಿ ಪಶುಪಾಲನೆ ಮುಖ್ಯ ಅಂಗವಾಗಿದ್ದು, ಇತ್ತೀಚಿನ ದಿನಗಳಲ್ಲಿ ಅನೇಕ ರೈತರು ಹೆಚ್ಚು ಹಾಲು ಕೊಡುವ ಅಧಿಕ ಬೆಲೆಯ ತಳಿಗಳಾದ ಜೆರ್ಸಿ, ಹೋಲ್ಸ್ಟೈನ್, ಮುರ್ರಾ ರಂತಹ ಜಾತಿ ಹಸು ಹಾಗೂ ಎಮ್ಮೆಗಳನ್ನು ಸಾಕುತ್ತಿದ್ದಾರೆ. ಈ ಸಾಕುಪ್ರಾಣಿ ವನ್ಯಪ್ರಾಣಿಗಳಿಂದ ಹತ್ಯೆಕ್ಕೀಡಾದ್ದಲ್ಲಿ ಅವರ ಜೀವನದ ಮೇಲೆ ಋಣಾತ್ಮಕ ಪರಿಣಾಮ ಬೀರುವ ಸಂಭವ ಹೆಚ್ಚಾಗಿದೆ. ಮುಂದುವರೆದು, ಈಗ ಕೋರಿರುವ ಗರಿಷ್ಠ ಪರಿಷ್ಕೃತ ದರ ರೂ.75,000/-ಗಳಲ್ಲಿ ರೂ.20,000/-ಗಳನ್ನು ಮಾತ್ರ ಘಟನೆ ನಡೆದ ತಕ್ಷಣ ಉಪ ಅರಣ್ಯ ಸಂರಕ್ಷಣಾಧಿಕಾರಿಯಿಂದ ಪಾವತಿಸಲು ಹಾಗೂ ಉಳಿದ ಅರ್ಹ ಮೊತ್ತವನ್ನು ಸ್ಥಳೀಯ ಪಶುವೈದ್ಯಾಧಿಕಾರಿಯಿಂದ ಪರಿಶೀಲಿಸಿ ಸತ್ತ ಸಾಕುಪ್ರಾಣಿಯ ಯೋಗ್ಯ ದರವನ್ನು ಮಾರುಕಟ್ಟೆ ಆಧರಿಸಿ ನಿರ್ಣಾಯಿಸಿದ ನಂತರವೇ ಪಾವತಿಸಬಹುದಾಗಿರುವುದರಿಂದ ದುರುಪಯೋಗವಾಗುವುದಕ್ಕೆ ಅವಕಾಶವಿಲ್ಲ. ಹೆಚ್ಚಿನ ಸ್ಪಷ್ಟತೆಗೋಸ್ಕರ ಕೆಳಕಂಡ ಪಟ್ಟಿಯಲ್ಲಿ ಹಾಲಿ ಪಾವತಿಸುತ್ತಿರುವ ದಯಾತ್ಮಕ ಧನ ಹಾಗೂ ಪ್ರಸ್ತಾಪಿಸಿದ ದಯಾತ್ಮಕ ಧನ ವಿವರಗಳನ್ನು ಕೆಳಕಂಡಂತೆ ನೀಡುತ್ತಾ, ವನ್ಯಪ್ರಾಣಿಗಳ ದಾಳಿಯಿಂದ ಸಾಕುಪ್ರಾಣಿಗಳಾದ ಹಸು, ಎತ್ತು, ಎಮ್ಮೆ, ಕೋಣ, ಕುರಿ, ಮೇಕೆ, ಆಡು ಮುಂತಾದ ಪ್ರಾಣಿಗಳು ಹತ್ಯೆ ಪ್ರಕರಣಗಳಲ್ಲಿ ಪಾವತಿಸುತ್ತಿರುವ ದಯಾತ್ಮಕ ಧನವನ್ನು ಪರಿಷ್ಕರಿಸುವಂತೆ ಕೋರಿರುತ್ತಾರೆ.

| ಕ್ರ.ಸಂ. | ವಿವರ | ಪಾವತಿಸಲಾಗುತ್ತಿರುವ ದಯಾತ್ಮಕ ಧನ | ಪ್ರಸ್ತಾಪಿಸಿರುವ ಪರಿಷ್ಕೃತ ದಯಾತ್ಮಕ ಧನ | ಷರಾ |
|---|---|---|---|---|
| 1 | ಹಸು, ಎತ್ತು, ಎಮ್ಮೆ, ಕೋಣ | ರೂ.10,000/- | ರೂ.20,000/- (ಕನಿಷ್ಠ)<br>ರೂ.75,000/- (ಗರಿಷ್ಠ) | ವನ್ಯಪ್ರಾಣಿಗಳ ದಾಳಿಯಿಂದ ಆಗುವ ಜಾನುವಾರು ಹತ್ಯೆ ಪ್ರಕರಣಗಳಲ್ಲಿ ಘಟನೆ ನಡೆದ ತಕ್ಷಣವೇ ರೂ.20,000/-ನ್ನು ಪಾವತಿಸಲು ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಅಧಿಕಾರ ನೀಡುವುದು ಹಾಗೂ ಉಳಿದ ಮೊತ್ತವನ್ನು ಪಶುಸಂಗೋಪನ ಇಲಾಖೆಯ ತಾಲ್ಲೂಕು ಅಧಿಕಾರಿಗಳ ಶಿಫಾರಸ್ಸಿಗೆ ಅನುಗುಣವಾಗಿ ಉಳಿದ ಮೊತ್ತವನ್ನು ಪಾವತಿಸಬಹುದಾಗಿರುತ್ತದೆ. |
| 2 | ಕುರಿ, ಮೇಕೆ, ಆಡು | ರೂ.5,000/- | ರೂ.10,000/- | ಪೂರ್ಣ ಮೊತ್ತವನ್ನು ಪ್ರಸ್ತುತ ಚಾಲ್ತಿಯಲ್ಲಿರುವ ಸರ್ಕಾರದ ಆದೇಶದಂತೆ ಕ್ರಮ ಕೈಗೊಂಡು ಪಾವತಿಸುವುದು. |

ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ:

**<u>ಸರ್ಕಾರಿ ಆದೇಶ ಇ-ಸಂಖ್ಯೆ: ಅಪಜೀ 144 ಎಫ್‌ಎಪಿ 2020,</u>**
**<u>ಬೆಂಗಳೂರು, ದಿನಾಂಕ:20.04.2021.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸಾಕುಪ್ರಾಣಿಗಳಾದ ಹಸು, ಎತ್ತು, ಎಮ್ಮೆ, ಕೋಣಗಳು ವನ್ಯಪ್ರಾಣಿಗಳ ದಾಳಿಯಿಂದ ಮೃತಪಟ್ಟಲ್ಲಿ, ಅವುಗಳ ಮಾಲೀಕರಿಗೆ ನೀಡಲಾಗುತ್ತಿರುವ ಪರಿಹಾರ ಧನವನ್ನು State Disaster Response Fund (SDRF) ನಲ್ಲಿನ ದರಗಳಂತೆ 2021-22ನೇ ಸಾಲಿನಿಂದ ಜಾರಿಗೆ ಬರುವಂತೆ ಪಾವತಿಸಲು ಅನುಮೋದನೆ ನೀಡಲಾಗಿದೆ.

ಸಂತ್ರಸ್ತರಿಗೆ ಪರಿಹಾರ ಮಂಜೂರಾತಿ ಸಂದರ್ಭದಲ್ಲಿ, ಸರ್ಕಾರದ ಆದೇಶ ಸಂಖ್ಯೆ: ಅಪಜೀ 143 ಎಫ್‌ಡಬ್ಲ್ಯೂಎಲ್ 2010, ದಿನಾಂಕ:30.04.2011 ಮತ್ತು ಸರ್ಕಾರದ ಆದೇಶ ಸಂಖ್ಯೆ: ಅಪಜೀ 143 ಎಫ್‌ಡಬ್ಲ್ಯೂಎಲ್ 2010, ದಿನಾಂಕ:03.08.2011 ರಲ್ಲಿರುವ ಷರತ್ತು ಮತ್ತು ನಿಬಂಧನೆಗಳನ್ನು ಪಾಲಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 660 ವೆಚ್ಚ-5/2020, ದಿನಾಂಕ:18.03.2021ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಗಾಯತ್ರಿ .ಎಲ್)**
ಸರ್ಕಾರದ ಅಧೀನ ಕಾರ್ಯದರ್ಶಿ,
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.
(ಅರಣ್ಯ-ಎ)

**<u>ಇವರಿಗೆ:</u>**

1. ಪ್ರಧಾನ ಮಹಾಲೇಖಪಾಲರು, (ಲೆಕ್ಕಪತ್ರ / ಲೆಕ್ಕಪರಿಶೋಧನೆ), ಕರ್ನಾಟಕ, ಬೆಂಗಳೂರು-560 001.

.....4

2. ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಯವರು, ವಿಧಾನಸೌಧ, ಬೆಂಗಳೂರು.
3. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅಪಮು), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
4. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
5. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅಭಿವೃದ್ಧಿ) ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
6. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಆಡಳಿತ ಮತ್ತು ಸಮನ್ವಯ) ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
7. ಆಯುಕ್ತರು, ಮತ್ತು ಪದನಿಮಿತ್ತ ಸರ್ಕಾರದ ಕಾರ್ಯದರ್ಶಿ, ಖಜಾನೆ-2, ಖನಿಜ ಭವನ, ಬೆಂಗಳೂರು.
8. ಮಾನ್ಯ ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
9. ಎಲ್ಲಾ ಮುಖ್ಯ ಅರಣ್ಯ ಸಂರಕ್ಷಣಾದಿಕಾರಿ, ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ – ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಮುಖಾಂತರ ರವಾನಿಸುವುದು.
10. ನಿರ್ದೇಶಕರು, ಖಜಾನೆ ನಿರ್ದೇಶನಾಲಯ, ಕೆ.ಪಿ.ಸಿ.ಎಲ್ ಕಟ್ಟಡ, 6ನೇ ಮಹಡಿ, ಔಷಧಿ ನಿಯಂತ್ರಣ ಕಛೇರಿ ಅವರಣ, ಪ್ಯಾಲೇಸ್ ರಸ್ತೆ, ಬೆಂಗಳೂರು.
11. ಜಿಲ್ಲಾ ಖಜಾನಾಧಿಕಾರಿ, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
12. ಉಪ ಖಜಾನಾಧಿಕಾರಿ, ಬೆಂಗಳೂರು ನಗರ ಜಿಲ್ಲಾ ಖಜಾನೆ, ಬೆಂಗಳೂರು.
13. ಸರ್ಕಾರದ ಉಪ ಕಾರ್ಯದರ್ಶಿ ಮತ್ತು ಆಂತರಿಕ ಆರ್ಥಿಕ ಸಲಹೆಗಾರರು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ, ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
14. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-5 & 7), ವಿಧಾನಸೌಧ, ಬೆಂಗಳೂರು.
15. ಶಾಖಾ ರಕ್ಷಾ ಕಡತ.